




## ಮಾಯಾ ಏಂಜೆಲೊ

ಕವಯಿತ್ರಿ, ನಾಗರಿಕ ಹಕ್ಕುಗಳ ಹೋರಾಟಗಾರ್ತಿ ಮಾಯಾ ಏಂಜೆಲೊ ಹದಿನಾರನೇ ವಯಸ್ಸಿಗೆ ಒಬ್ಬಂಟಿಯಾಗಿ ಮಗುವನ್ನು ಸಾಕಬೇಕಾದ ಸಂದರ್ಭಕ್ಕೆ ಸಾಕ್ಷಿಯಾದವರು.

ಪುಟ್ಟ ವಯಸ್ಸಿಗೇ ಮಗುವನ್ನು ಸಾಕಬೇಕಾದ ಸಂದರ್ಭ ಬಂದಾಗ, ಧೈರ್ಯದಿಂದಲೇ ಮುನ್ನುಗ್ಗಿದ್ದರು. ಮಗುವನ್ನು ಹೆತ್ತ ನಂತರ ಅಡುಗೆಯವಳಾಗಿ ಹೋಟೆಲ್‌ಗಳಲ್ಲಿ ಕೆಲಸಕ್ಕೆ ಸೇರಿಕೊಂಡರು. ಹಲವು ಚಿಕ್ಕಪುಟ್ಟ ಕೆಲಸಗಳನ್ನು ಮಾಡಿ ಬದುಕು ಸಾಗಿಸಿದರು.

ಎರಡು ಬಾರಿ ಮದುವೆಯಾಗಿ ಎರಡು ಬಾರಿಯೂ ವಿಚ್ಛೇದನವಾದರೂ ತಮ್ಮ ವಯಸ್ಕ ಜೀವನವನ್ನು ಏಕ ಪೋಷಕಿಯಾಗಿಯೇ ಕಳೆದರು. ತಾಯ್ತನದ ಖುಷಿ, ಸವಾಲುಗಳ ಕುರಿತಾಗಿಯೇ ಅವರ ಹಲವು ಕವಿತೆಗಳು ರೂಪುಗೊಂಡವು.

'ನನ್ನ ಮಗನೇ ನನಗೆ ಅತಿ ದೊಡ್ಡ ಉಡುಗೊರೆ. ತಾಯಿಯಾಗಿರುವುದು ಹೆಮ್ಮೆಯ ಕ್ಷಣ' ಎಂದು ಹೇಳಿಕೊಂಡಿದ್ದರು. 'ತುಂಬಾ ಕಷ್ಟದಲ್ಲಿ ಒಬ್ಬಂಟಿ ತಾಯಿಯಾಗಿ ನನ್ನ ಜೀವನ ಆರಂಭವಾಯಿತು. ಆದರೆ ನನ್ನಲ್ಲಿನ ಅತ್ಯುತ್ತಮವಾದದನ್ನು ಹೊರಗೆ ತಂದ ನನ್ನ ಮಗ, ಜೀವನಕ್ಕೆ ಬೇರೆಯದೇ ದೃಷ್ಟಿಕೋನ ನೀಡಿದ' ಎಂದು ಭಾವುಕರಾಗಿ ಮಾತನಾಡಿದ್ದರು.

## ಪೂಜಾ ಬೇಡಿ




ಉದ್ಯಮಿ ಫರಾನ್ ಇಬ್ರಾಹಿಂ ಅವರೊಂದಿಗಿನ ಹತ್ತು ವರ್ಷಗಳ ದಾಂಪತ್ಯ ಜೀವನ ಕೊನೆಗೊಂಡ ನಂತರ ಇಬ್ಬರು ಮಕ್ಕಳನ್ನು ತಾವೇ ಬೆಳೆಸುತ್ತಾ ಬಂದಿರುವ ಬಾಲಿವುಡ್ ನಟಿ ಪೂಜಾ ಬೇಡಿ, ಮಕ್ಕಳ ಪೋಷಣೆ ತಮ್ಮ ಜೀವನ ಪುಟದ ಬಹುದೊಡ್ಡ ಅಧ್ಯಾಯ ಎಂದು ಹೇಳಿಕೊಂಡಿದ್ದಾರೆ.

ಸಿಂಗಲ್ ಪೇರೆಂಟಿಂಗ್ ಕುರಿತು ಮಾತನಾಡಿರುವ ಅವರು, 'ತಾಯಿಯಾಗಿ ಒಬ್ಬಳೇ ಹಲವು ಪಾತ್ರಗಳನ್ನು ನಿಭಾಯಿಸಬೇಕಿತ್ತು, ತಂದೆ, ಸ್ನೇಹಿತ, ಹೀರೊ, ವಿಲನ್ ಎಲ್ಲವೂ ನಾನೇ ಆಗಬೇಕಿತ್ತು. ಇದು ಎಂದಿಗೂ ಮರೆಯಲಾರದ ಪಯಣ. ಅವರ ಜೀವನಕ್ಕೆ ಏನು ಬೇಕೋ ಎಲ್ಲವನ್ನೂ ಕೊಡಲು ಪ್ರಯತ್ನಿಸಿದೆ. ಅವರನ್ನು ಯಾವುದಕ್ಕೂ ಒತ್ತಾಯಿಸಲಿಲ್ಲ. ಈಗಲೂ ಈ ಕುರಿತು ನನ್ನ ಬಗ್ಗೆ ನನಗೆ ಹೆಮ್ಮೆಯಾಗುತ್ತದೆ' ಎಂದಿದ್ದಾರೆ.

ಸಂಕೇತವೂ ಆಗಿದೆ. ಒಂಟಿಯಾಗಿ ಮಕ್ಕಳನ್ನು ಸಾಕಿ ಸಲಹಿ ಯಶಸ್ವಿಯಾದ, ಮಕ್ಕಳನ್ನೂ ಯಶಸ್ಸಿನ ಗುರಿ ಮುಟ್ಟಿಸಿದ ತಾಯಂದಿರ ಹಲವು ಉದಾಹರಣೆಗಳು ನಮ್ಮ ಕಣ್ಣಮುಂದಿವೆ. ಒಂಟಿಯಾಗಿ ಮಕ್ಕಳನ್ನು ಸಾಕಿ ಸಲಹುವುದು ಮಹಿಳೆಯಲ್ಲಿನ ಅಂತಃಶಕ್ತಿಯ ರೂಪಕವಾಗಿಯೂ ಕಂಡುಬರುತ್ತಿದೆ.

ಬದಲಾದ ಕಾಲಘಟ್ಟದಲ್ಲಿ 'ಸಿಂಗಲ್ ಮದರ್ ಪೇರೆಂಟಿಂಗ್ ಆಲೋಚನೆ' ತನ್ನ ಅರ್ಥವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ. ಮದುವೆಯಾಗದೇ ಅಥವಾ ಮದುವೆಯಾಗಿಯೂ ಮಕ್ಕಳನ್ನು ದತ್ತು ಪಡೆಯುವ, ಮಕ್ಕಳಿದ್ದರೂ ಬೇರೆ ಮಕ್ಕಳನ್ನು ದತ್ತು ಪಡೆಯುವ ಮೂಲಕ ಮಾತೃತ್ವದ ಸುಖ ದುಃಖಗಳನ್ನು ಪಡೆಯಲು ಹಂಬಲಿಸುವ ಮಹಿಳೆಯರ ಸಂಖ್ಯೆ ಏರುಗತಿಯಲ್ಲಿದೆ.

### ಭಾರತದಲ್ಲೂ 'ಸ್ವತಂತ್ರ ಮನೋಭಾವದ ತಾಯಂದಿರು'

ಮದುವೆಯ ಆಸರೆಯಿಲ್ಲದೆ ಮಕ್ಕಳನ್ನು ಪಡೆಯುವುದು ಹಾಗೂ ತಾಯಿಯೊಬ್ಬಳೇ ಮಕ್ಕಳನ್ನು ಸಲಹುವುದನ್ನು